ಮೂಲ ದಾವೆ ನಂ.48/2019
DW-02

**ದಿನಾಂಕಃ 26-02-2026.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಪ್ರತಿವಾದಿಗಳ ಪರ ಶ್ರೀ SVK ಮಾನ್ಯ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

2. ಸಾಕ್ಷಿಯು ನಿಡಿ.15 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ.15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿ.15 ರ ಮೇಲಿರುವ ವೆಂಡರ ಶ್ರೀ ಎಸ್. ನಾಗಪ್ಪ ಇವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಡಿ.15(ಬಿ)ಎಂದು ಗುರುತಿಸಲಾಯಿತು. ಸಾಕ್ಷಿಯು ನಿಡಿ.15 ಕ್ಕೆ ಸಾಕ್ಷಿಗಳಾಗಿ ಶೀ ಬಸರಾಜಪ್ಪ ತಂದೆ ಶಂಕ್ರಪ್ಪ ಹಾಗೂ ಶ್ರೀ ಶರಣಪ್ಪ ತಂದೆ ಪರಮಣ್ಣ ಇವರು ಸಹಿಗಳನ್ನು ಹಾಕಿರುತ್ತಾರೆ ಹಾಗೂ ಇನ್ನೊಬ್ಬ ಸಾಕ್ಷಿ ಶ್ರೀ ಇಸ್ಮಾಯಿಲ್ ತಂದೆ ಖಾಜಾ ಸಾಬ್ ಇವರು ತಮ್ಮ ಹೆಬ್ಬಟ್ಟಿನ ಗುರುತನ್ನು ಹಾಕಿರ ತ್ತಾರೆ. ಸದರಿ ಬಸವರಾಜ ಹಾಗೂ ಶರಣಪ್ಪ ಇವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗ ಕ್ರಮವಾಗಿ ನಿಡಿ.15(ಸಿ) ಹಾಗೂ ನಿಡಿ.15(ಡಿ) ಎಂದು ಗುರುತಿಸಲಾದವು. ನಿಡಿ.15 ರ ಮೇಲಿರುವ ಬರಹಗಾರರಾದ ಶ್ರೀ ಆರ್.ವಿ. ಗವೀಮಠ ಇವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ನಿಡಿ.15(ಇ) ಎಂದು ಗುರುತಿಸಲಾಯಿತು. ಪ್ರಸ್ತುತ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ ವಾದಿಯ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು.ಪ್ರ.ದ.ನ್ಯಾ.ದಂ. ಶಹಾಪೂರ.